ಭಾರತೀಯ ಭಾಷೆಗಳ ಪ್ರಚಾರದಲ್ಲಿ AI ಬಳಕೆ

ರಾಮರೆಡ್ಡಿ ಕೆ.

ಸಹಾಯಕ ಪ್ರಾಧ್ಯಾಪಕ, ಕನ್ನಡ ವಿಭಾಗ, ಕೆ.ಎಲ್.ಇ.ಸಂಸ್ಥೆಯ, ಎಸ್.ವಿ.ಎಸ್. ಬೆಳ್ಳುಬ್ಬಿ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಸವದತ್ತಿ, ಬೆಳಗಾವಿ ಜಿಲ್ಲೆ.

DOI: https://doi.org/10.5281/zenodo.18332616

ABSTRACT:

ಇಂದಿನ ಮಾನವ ಜೀವನ ತಂತ್ರಜ್ಞಾನದಿಂದ ಬೇರ್ಪಡಲಾಗದ ಹಂತವನ್ನು ತಲುಪಿದೆ. ಅದರಲ್ಲೂ ಕೃತಕ ಬುದ್ಧಿಮತ್ತೆ (Artificial Intelligence – AI) ಎಂಬ ತಂತ್ರಜ್ಞಾನವು ಮಾನವನ ಆಲೋಚನಾ ಕ್ರಮ, ವಿವಿಧ ಕಾರ್ಯ ಹಾಗೂ ಸಂವಹನದ ರೀತಿ–ನೀತಿಗಳನ್ನು ಆಳವಾಗಿ ಪ್ರಭಾವಿಸುತ್ತಿದೆ. ಯಂತ್ರಗಳಿಗೆ ಮಾನವನ ಬುದ್ಧಿಮತ್ತೆಯನ್ನು ಮರುಸೃಜಿಸುವ ಪ್ರಯತ್ನವಾಗಿ ಆರಂಭವಾದ ಎಐ ಇಂದು ಶಿಕ್ಷಣ, ಆಡಳಿತ, ಕೈಗಾರಿಕೆ, ವೈದ್ಯಕೀಯ, ವ್ಯಾಪಾರ ಮತ್ತು ಭಾಷಾ ವಲಯಗಳಲ್ಲಿಯೂ ವ್ಯಾಪಕವಾಗಿ ಬಳಕೆಯಾಗುತ್ತಿದೆ. ಈ ಪ್ರಬಂಧವು ಕೃತಕ ಬುದ್ಧಿಮತ್ತೆಯ ಇತಿಹಾಸ, ಬೆಳವಣಿಗೆ ಹಾಗೂ ಅದರ ಭಾಷೆಯೊಂದಿಗೆ ಇರುವ ಸಂಬಂಧವನ್ನು ವಿಶ್ಲೇಷಿಸುತ್ತದೆ. ವಿಶೇಷವಾಗಿ ಶೈಕ್ಷಣಿಕ ವಲಯದಲ್ಲಿ ಭಾಷಾ ಕಲಿಕೆ, ಪಠ್ಯ ಸರಳೀಕರಣ, ಉಚ್ಚಾರ–ಅರ್ಥ ವಿವರಣೆ, ಅನುವಾದ ಮುಂತಾದ ಕ್ಷೇತ್ರಗಳಲ್ಲಿ ಎಐಯ ಬಳಕೆಯ ಸಾಧ್ಯತೆಗಳನ್ನು ಚರ್ಚಿಸುತ್ತದೆ. ಜೊತೆಗೆ ಆಡಳಿತ ಭಾಷೆಯಲ್ಲಿನ ಬಳಕೆ, ಸಾರ್ವಜನಿಕ ಸಂವಹನದ ಸುಲಭತೆ ಹಾಗೂ ಭಾಷಾ ದಾಖಲೀಕರಣದ ಮಹತ್ವವನ್ನೂ ವಿವರಿಸುತ್ತದೆ. ಇದೇ ಸಂದರ್ಭದಲ್ಲಿ ಎಐ ಬಳಕೆಯಿಂದ ಎದುರಾಗುವ ಸವಾಲುಗಳು, ಅಪಾಯಗಳು ಹಾಗೂ ನೈತಿಕ ಪ್ರಶ್ನೆಗಳನ್ನೂ ಈ ಅಧ್ಯಯನ ವಿಶ್ಲೇಷಿಸುತ್ತದೆ. ಭಾಷೆಯ ಉಳಿವು, ಬೆಳವಣಿಗೆ ಮತ್ತು ಮಾನವೀಯ ಮೌಲ್ಯಗಳ ಸಂರಕ್ಷಣೆಯ ದೃಷ್ಟಿಯಿಂದ ಎಐ ತಂತ್ರಜ್ಞಾನವನ್ನು ಜವಾಬ್ದಾರಿಯುತ ಹಾಗೂ ಸೃಜನಾತ್ಮಕವಾಗಿ ಬಳಸಿಕೊಳ್ಳಬೇಕೆಂಬ ಅಗತ್ಯವನ್ನು ಈ ಲೇಖನ ತಿಳಿಸುತ್ತದೆ.

KEYWORDS:

ಕೃತಕ ಬುದ್ಧಿಮತ್ತೆ, ಆಡಳಿತ ಭಾಷೆ, ಶೈಕ್ಷಣಿಕ ವಲಯ, ತಂತ್ರಜ್ಞಾನ ಮತ್ತು ಭಾಷೆ, ಭಾಷಾ ಅಭಿವೃದ್ಧಿ, ಎಐ ಸವಾಲುಗಳು, ಡಿಜಿಟಲ್ ಯುಗ.

ಪೀಠಿಕೆ:

ಮನುಷ್ಯ ದಿನ ನಿತ್ಯ ತಂತ್ರಜ್ಞಾನದ ಸಹವಾಸದಲ್ಲೇ ಬದುಕುತ್ತಿದ್ದಾನೆ. ತಂತ್ರಜ್ಞಾನವಿಲ್ಲದೆ ಬದುಕೇ ಇಲ್ಲ ಎನಿಸುವಷ್ಟರ ಮಟ್ಟಿಗೆ ಬದುಕಿನ ಭಾಗವಾಗಿ ಹೋಗಿದೆ. ಇತ್ತೀಚೆಗೆ ಕೃತಕ ಬುದ್ಧಿಮತ್ತೆ (Artificial Intelligence) ಎನ್ನುವಂತಹ ತಾಂತ್ರಿಕತೆ ಬಹಳಷ್ಟು ಸದ್ದು ಮಾಡುತ್ತಿದೆ. ಕೃತಕ ಬುದ್ಧಿಮತ್ತೆ ಎನ್ನುವುದಕ್ಕಿಂತಲೂ ಯಾಂತ್ರಿಕ ಬುದ್ಧಿಮತ್ತೆ ಎನ್ನುವುದೇ ಸರಿಯಾದ ಕ್ರಮ. ಈ ಪ್ರಬಂಧದ ಶೀರ್ಷಿಕೆಯ ಹಿನ್ನೆಲೆಯಲ್ಲಿ ಎಐ ಅಥವಾ ಕೃತಕ ಬುದ್ಧಿಮತ್ತೆ ಎನ್ನುವ ಪದವನ್ನೇ ಬಳಸೋಣ.

ಕೃತಕ ಬುದ್ಧಿಮತ್ತೆಯ ಇತಿಹಾಸ:

'ಎಐ ಎಂಬುದು ನಿನ್ನೆ ಹುಟ್ಟಿ, ಇಂದು ಮುಗಿಲೆತ್ತರಕ್ಕೆ ಬೆಳೆದು ನಿಂತ ಪೆಡಂಭೂತವಲ್ಲ. ಯಂತ್ರಗಳಿಗೆ ಬುದ್ಧಿ ಕಲಿಸುವ ಕೆಲಸ 1950ರಿಂದಲೂ ಸಾಗುತ್ತಲೇ ಬಂದಿದೆ. ಈ ಹಿಂದೆ ಎರಡು ಬಾರಿ ಕೃತಕ ಬುದ್ಧಿಮತ್ತೆ ತನ್ನ ಪ್ರವೇಶಕ್ಕೆ ಪ್ರಯತ್ನ ಮಾಡಿದರೂ, ಡಿಜಿಟಲ್ ಪರಿಸರ ಅದಕ್ಕೆ ಪೂರಕವಾಗಿಲ್ಲದ ಕಾರಣ ಅದರ ಪ್ರಭಾವ ಅಷ್ಟಾಗಿ ಬಾಧಿಸಿರಲಿಲ್ಲ. ಯಂತ್ರಗಳ ಕೈಗೆ ಬುದ್ಧಿ ನೀಡುವ ಪ್ರಯತ್ನದಲ್ಲಿ 1965ರಲ್ಲಿ ಮೊದಲ ಅಲೆ, 1985ರಲ್ಲಿ ರೊಬೊ ರೂಪದಲ್ಲಿ ಎರಡನೇ ಅಲೆಯಾಗಿ ಅಪ್ಪಳಿಸಿದರೂ ದೊಡ್ಡಮಟ್ಟದ ಆಘಾತ ಸೃಷ್ಟಿಸುವಲ್ಲಿ ಅವು ವಿಫಲವಾದವು. ಆದರೆ ಅಂತರ್ಜಾಲ ಹಾಗೂ ಸ್ಮಾರ್ಟ್ ಫೋನ್ ಪ್ರವೇಶವೊಂದು ಡಿಜಿಟಲ್ ವಿರಾಟರೂಪ ತೋರಿಸಿದೆ.' ಇದರ ಪರಿಣಾಮದಿಂದ ಇಂದು ಕ್ಷಣಾರ್ಧದಲ್ಲಿ ಜಗತ್ತಿನ ಯಾವುದೇ ಮೂಲೆಯಲ್ಲಿರುವ ವ್ಯಕ್ತಿಯ ಅಥವಾ ಸಂಸ್ಥೆಯ ಜೊತೆ ಸಂಪರ್ಕ ಸಾಧ್ಯವಾಗಿದೆ. ಅಂತರ್ಜಾಲ ಮತ್ತು ಮೊಬೈಲ್ ಜನರ ಕೈಗೆ ಬಂದ ಹೊಸದರಲ್ಲಿ ಜಗತ್ತೇ ಒಂದು ಗ್ರಾಮವಾಗಿ ಪರಿವರ್ತನೆಯಾಗತೊಡಗಿತು. ಈ ಜಾಗತಿಕ ಗ್ರಾಮಕ್ಕೆ ಗೌಡನ್ಯಾರು ಎನ್ನುವ ಪ್ರಶ್ನೆ ನಮ್ಮ ಮುಂದಿದೆ.

ಕೃತಕ ಬುದ್ಧಿಮತ್ತೆಯು ಮನುಷ್ಯನ ಕುತೂಹಲ ಮತ್ತು ಹೊಸದಾದ ಆಲೋಚನೆಗಳ ಪ್ರತಿಫಲ. ಇದು ಮನುಷ್ಯನ ಆಲೋಚನಾ ಕ್ರಮದ ಹಿನ್ನೆಲೆಯಲ್ಲಿ ತನಗೆ ಅನಿಸಿದ್ದು ಸಾಧ್ಯವಾಗಬೇಕೆಂಬ ಆಲೋಚನಾ ಕ್ರಮದಲ್ಲಿ ರೂಪುಗೊಂಡಿದೆ. ಅರವತ್ತರ ದಶಕದಿಂದ ಎಂಭತ್ತರ ದಶಕದವರೆಗೆ ಬಂದಿರುವ ಕನ್ನಡ ಮತ್ತು ಕನ್ನಡೇತರ ಸಿನಿಮಾಗಳನ್ನು ಗಮನಿಸಿದಾಗ ಮೇಲಿನ ಅಂಶ ನಮಗೆ ಸ್ಪಷ್ಟವಾಗಬಲ್ಲದು. 'ರಾಜಕುಮಾರ್ ಅವರ ಹಳೆಯ ಬಾಂಡ್ ಸಿನಿಮಾಗಳನ್ನೋ, ಪತ್ತೆದಾರಿ ಸಿನಿಮಾಗಳನ್ನೋ ನೋಡುವಾಗ ಎಳೆಯರಾಗಿದ್ದ ನಾವೆಲ್ಲ ಅದೆಷ್ಟು ವಿಸ್ಮಿತರಾಗುತ್ತಿದ್ದೆವಲ್ಲ? ಒಂದು ಬಟನ್ ಒತ್ತಿದರೆ, ಅಲ್ಲೆಲ್ಲೋ ಮಿಣಮಿಣ ಬೆಳಕು ಮೂಡಿ, ತಿರುಗುವ ಕುರ್ಚಿ ಬಂದು, ಮತ್ತೆಲ್ಲೋ ಅಡಗಿದ್ದ ಬಾಗಿಲು ತೆರೆದುಕೊಂಡು, ಇನ್ನೆಲ್ಲೋ ಅಡಗಿದ್ದ ಗನ್ ಹೊರಬಂದು–ಹೀಗೆ ಅಸಾಧ್ಯವೆನ್ನುವುದನ್ನು ಸಾಧ್ಯವೆನಿಸುವಂತೆ ತೋರಿಸಲಾಗುತ್ತಿತ್ತು.'

ಇದರ ನಂತರದಲ್ಲಿ ಬಂದ ಮತ್ತೊಂದು ಸಿನಿಮಾ ತಮಿಳಿನ ಸೂಪರ್

ಸ್ಟಾರ್ ರಜನಿಕಾಂತ್ ಅವರ 'ಎಂದಿರನ್'. ಈ ಸಿನಿಮಾ 1ನೆಯ ಅಕ್ಟೋಬರ್ 2010ರಂದು (ಹಿಂದಿ ಭಾಷೆ ರೋಬೊ) ಬಿಡುಗಡೆಯಾಯಿತು. ಈ ಸಿನಿಮಾ ಜನರಿಗೆ ಮನರಂಜನೆಯ ಜೊತೆಗೆ ತಂತ್ರಜ್ಞಾನದ ಹೊಸ ಸಾಧ್ಯತೆಗಳನ್ನು ಪರಿಚಯಿಸಿತ್ತು. ಇದರಲ್ಲಿ ವಿಜ್ಞಾನಿಯೊಬ್ಬ ಮಾನವನನ್ನು ಹೋಲುವ ರೋಬೊ ತಯಾರಿಸಿ, ಅದಕ್ಕೆ ಮನುಷ್ಯ ಮಾಡಬಲ್ಲ ಎಲ್ಲ ಚಟುವಟಿಕೆಗಳನ್ನು ಪ್ರೊಗ್ರಾಮಿಂಗ್ (ಕ್ರಮ ವಿಧಿ ರಚನೆ) ಮಾಡುತ್ತಾನೆ. ಅದು ಮನುಷ್ಯ ಮಾಡಬಹುದಾದ ಎಲ್ಲ ಕೆಲಸಗಳನ್ನು ಮನುಷ್ಯನಿಗಿಂತಲೂ ಸುಲಭವಾಗಿ ಮತ್ತು ವೇಗವಾಗಿ ಮಾಡಿ ಮುಗಿಸುತ್ತಿತ್ತು. ಮುಂದುವರೆದು ಬರೀ ಕೆಲಸವಷ್ಟೇ ಅಲ್ಲ ಮನುಷ್ಯನ ಭಾವನಾ ಜಗತ್ತಿಗೂ ಕಾಲಿಟ್ಟು, ಪ್ರೀತಿ–ಪ್ರೇಮವನ್ನೂ ವ್ಯಕ್ತಪಡಿಸುವಷ್ಟರಮಟ್ಟಿಗೆ ರೂಪುಗೊಂಡಿತು. ಒಂದೂವರೆ ದಶಕದ ಹಿಂದೆ ಬಿಡುಗಡೆಯಾದ ಈ ಸಿನಿಮಾದ ದೃಶ್ಯಾವಳಿಗಳು ಇಂದು ವಾಸ್ತವ ಜಗತ್ತಿನಲ್ಲಿ ಸಾಕಾರಗೊಳ್ಳುತ್ತಿವೆ. ಕಾರಣ ಜಾಗತಿಕ ಮಟ್ಟದಲ್ಲಿ ಉಂಟಾದ ನ್ಯಾನೋ ತಂತ್ರಜ್ಞಾನದ ಪ್ರತಿಫಲವೆನ್ನಬಹುದು.

ಅಂದು ಸಿನಿಮಾದಲ್ಲಿ ಕಾಲ್ಪನಿಕವಾಗಿ ಸೃಜಿಸಿದ ಕಥಾ ಹಂದರದ ದೃಶ್ಯಾವಳಿಯ ಚಿತ್ರಣವು ಇಂದು ವಾಸ್ತವದ ನೆಲೆಯಲ್ಲಿ ಸಾಧ್ಯವಾಗಿಸಿದ್ದು ಮಾನವನ ಬಹು ದೊಡ್ಡ ಸಾಧನೆ. ವಿಜ್ಞಾನ, ತಂತ್ರಜ್ಞಾನ, ವೈದ್ಯಕೀಯ, ಕೈಗಾರಿಕೆ, ಕೃಷಿ, ವ್ಯಾಪಾರ, ಸಾರಿಗೆ, ತಯಾರಿಕೆ ಮುಂತಾದ ಕ್ಷೇತ್ರಗಳಲ್ಲಿ ಈ ಕೃತಕ ಬುದ್ಧಿಮತ್ತೆ ಶರವೇಗದಲ್ಲಿ ಬಳಕೆಯಾಗುತ್ತಿದೆ. 'ಸದ್ಯದ ತಂತ್ರಜ್ಞಾನ ಜಗತ್ತಿನಲ್ಲಿ ಜ್ಞಾನಕ್ಕೆ ಸಂಬಂಧಿಸಿದ ಶೇಕಡಾ 60 ರಿಂದ ಶೇಕಡಾ 70ರಷ್ಟು ಕೆಲಸಗಳು ಕೃತಕ ಬುದ್ಧಿಮತ್ತೆಯನ್ನೇ ಆಧರಿಸಿವೆ.' ಈ ಕ್ರಾಂತಿಕಾರಿ ಆವಿಷ್ಕಾರ ಹೊಸ ಬಗೆಯ ಜಗತ್ತನ್ನೇ ಸೃಷ್ಟಿಸಿದೆ.

'ಕೃತಕ ಬುದ್ಧಿಮತ್ತೆ ಗಣಕ ವಿಜ್ಞಾನದ ಒಂದು ಭಾಗ... ಇದರಲ್ಲಿ ಒಂದು ಯಂತ್ರವು ತನ್ನ ಪರಿಸರವನ್ನು ಗ್ರಹಿಸಿ ತನಗೆ ಕೊಟ್ಟಿರುವ ಗುರಿಯತ್ತ ಹೆಚ್ಚು ಯಶಸ್ಸು ಪಡೆಯಲು ಅಗತ್ಯವಿರುವ ಕ್ರಮಗಳನ್ನು ತಾವೇ ಕೈಗೊಳ್ಳುತ್ತದೆ. ಇದು ಮನುಷ್ಯನ ಬುದ್ಧಿಮತ್ತೆಯ ಎಲ್ಲಾ ಸಾಮರ್ಥ್ಯಗಳನ್ನು ಮರು ರಚಿಸಲು ಸಾಧ್ಯವೆಂಬುದು ಕೃತಕ ಬುದ್ಧಿಮತ್ತೆಯ ವಾದ.' ಈ ವಾದವನ್ನು ಒಪ್ಪಲಿ ಬಿಡಲಿ ಆದರೆ ಈ ಕೃತಕ ಬುದ್ಧಿಮತ್ತೆ ಭೂಲೋಕದಲ್ಲಿ ತನ್ನ ಚಟುವಟಿಕೆಯನ್ನು ಪ್ರಾರಂಭಿಸಿಬಿಟ್ಟಿದೆ.

ಈ ಎಐಯನ್ನು ಭಾಷೆಯ ಪ್ರಚಾರದಲ್ಲಿ ಬಳಸಿಕೊಳ್ಳುವುದು ಹೇಗೆ?

ಭಾಷೆ ಎನ್ನುವುದು ಮಾನವನ ಬಹು ದೊಡ್ಡ ಶಕ್ತಿ. ನಾಗರೀಕತೆ ಬೆಳೆದ ಹಾಗೆಯೇ ಮನುಷ್ಯನ ಭಾವನೆಗಳನ್ನು ವ್ಯಕ್ತಪಡಿಸಲು ಇರುವ ಏಕೈಕ ಶಕ್ತಿ ಎಂದರೆ ಭಾಷೆ. ಈ ಭಾಷೆ ಜಗತ್ತಿನ ಮನುಷ್ಯೇತರ ಜೀವಿಗಳಿಗಿಂತಲೂ ಉತ್ತಮವಾದ ಸಂವಹನ ಮಾಧ್ಯಮವಾಗಿ ಮನುಷ್ಯ ಬಳಸಿಕೊಳ್ಳುತ್ತಿದ್ದಾನೆ. ಭಾರತದಲ್ಲಿ 2011ರ ಜನಗಣತಿಯ ಪ್ರಕಾರ ಮುಖ್ಯ ಭಾಷೆಗಳೆಂದು 19500 ಗುರುತಿಸಲಾಗಿದೆ. ಇದರಲ್ಲಿ ಸಂವಿಧಾನದ 8ನೆಯ ಶೆಡ್ಯುಲ್‌ನಲ್ಲಿ 22 ಭಾಷೆಗಳನ್ನು ಅಧಿಕೃತವಾಗಿ ಗುರುತಿಸಲಾಗಿದೆ. ಈ 22 ಭಾಷೆಗಳಲ್ಲಿ ಯಾವುದಾದರೂ ಒಂದು ಭಾಷೆಯನ್ನು ಆಧಾರವಾಗಿಟ್ಟುಕೊಂಡು

ರಾಷ್ಟ್ರೀಯ ಭಾಷೆ ಎಂದು ಘೋಷಿಸಿಲ್ಲ. ಆದರೆ ಈ 22 ಭಾಷೆಗಳನ್ನೇ ಭಾರತದ ಹಲವು ರಾಜ್ಯಗಳಲ್ಲಿ ಬಳಸುತ್ತಿರುವುದರಿಂದ, ಇವುಗಳನ್ನೇ ಸಾಂವಿಧಾನಿಕವಾಗಿ ಆಡಳಿತದಲ್ಲಿ ಬಳಸುತ್ತಿರುವುದರಿಂದ ಇವುಗಳೆಲ್ಲವೂ ಸಾಂವಿಧಾನಿಕಾತ್ಮಕ ಭಾಷೆಗಳೆಂದು ಮಾನ್ಯತೆಯಿದೆ.

ಇತ್ತೀಚಿನ ಕೆಲವು ದಶಕಗಳಿಂದ ಭಾಷೆಯ ಕುರಿತಾಗಿ ಶೈಕ್ಷಣಿಕ, ಆಡಳಿತಾತ್ಮಕ, ರಾಜಕೀಯ ಮತ್ತು ಸಾಮಾಜಿಕ ವಲಯದಲ್ಲಿ ಒಂದಿಷ್ಟು ಸಮಸ್ಯೆಗಳನ್ನು ಎದುರಿಸುವ ಪರಿಸ್ಥಿತಿ ನಿರ್ಮಾಣವಾಗಿದೆ. ಇಂದು ಇಂಗ್ಲಿಷ್ ಭಾಷೆಯನ್ನು ಪ್ರಮುಖವಾಗಿಟ್ಟುಕೊಂಡು ಇದನ್ನು ಕಲಿತರೆ ಮಾತ್ರ ಬದುಕನ್ನು ಕಟ್ಟಿಕೊಳ್ಳಬಹುದು ಎನ್ನುವ ಪರಿಸ್ಥಿತಿ ನಿರ್ಮಾಣವಾಗಿದೆ. ಮನುಷ್ಯನಿಗೆ ಹಲವು ಭಾಷೆಯಲ್ಲಿ ಪರಿಣತಿ ಇದ್ದಾಗ ಮಾತ್ರ ಉತ್ತಮವಾದ ಜೀವನ ರೂಪಿಸಿಕೊಳ್ಳಲು ಸಾಧ್ಯವಿದೆ. ಆದರೆ ಒಂದೇ ಭಾಷೆಗೆ ಕೇಂದ್ರೀಕೃತನಾಗುವುದರಿಂದ ಅವನಿಗೆ ಕಲಿಕೆಯ ಪರಿಪೂರ್ಣತೆಯಾಗಲಿ, ಸೃಜನಶೀಲನಾಗಿ ಕಾರ್ಯಪ್ರವೃತ್ತನಾಗುವಲ್ಲಿ ವಿಫಲನಾಗುತ್ತಾನೆ.

ಶೈಕ್ಷಣಿಕ ವಲಯದಲ್ಲಿ ಎಐ ಬಳಕೆಯ ಸಾಧ್ಯತೆ

ಕೃತಕ ಬುದ್ಧಿಮತ್ತೆಯ ಮೂಲಕ ಒಂದು ಭಾಷೆಯ ಪ್ರಚಾರಕ್ಕಾಗಿಯಾಗಲಿ, ಬೆಳವಣಿಗೆಯಾಗಲಿ ಸಾಧ್ಯವೆನ್ನುವ ಸಂಗತಿಗಳು ಇನ್ನೂ ಸ್ಪಷ್ಟವಾಗಿಲ್ಲ. ಪ್ರತಿ ನಲವತ್ತು ಕಿಲೋಮೀಟರಿಗೆ ಭಾಷೆಯು ತನ್ನ ಸ್ವರೂಪ, ವಿನ್ಯಾಸ, ಉಚ್ಚಾರ, ಅರ್ಥ/ಅನರ್ಥ (ಅಪಾರ್ಥ) ಭಿನ್ನವಾಗಿರುತ್ತದೆ. ಇಂತಹ ಸಂದರ್ಭದಲ್ಲಿ ಕೃತಕ ಬುದ್ಧಿಮತ್ತೆಯ ಮೂಲಕ ಭಾಷೆಯ ವಿಶಿಷ್ಟತೆಯನ್ನು ಪರಿಚಯಿಸಬಹುದು. ಶೈಕ್ಷಣಿಕ ವಲಯದಲ್ಲಿ ಎದುರಾಗುವ ಹಲವು ಸಮಸ್ಯೆ ಸವಾಲುಗಳನ್ನು ಬಗೆಹರಿಸಿಕೊಳ್ಳಬಹುದು. ಉದಾಹರಣೆಗೆ ಪದಗಳ ರಚನೆ, ಉಚ್ಚಾರ, ಅರ್ಥ ಮತ್ತು ವಿವರಣೆಯನ್ನು ಅರಿತುಕೊಳ್ಳಬಹುದು. ಕ್ಲಿಷ್ಟವಾಗಿರುವ ಪಠ್ಯಗಳನ್ನು ಸರಳರೂಪದಲ್ಲಿ ಕಲಿಯಲು ಅನುಕೂಲವಾಗಬಹುದು. ಅನ್ಯ ಭಾಷಿಕರಿಗೆ ಕನ್ನಡ ಭಾಷೆಯನ್ನು ಕೃತಕ ಬುದ್ಧಿಮತ್ತೆಯ ಮೂಲಕ ಸಮರ್ಥವಾಗಿ ಕಲಿಕಾ ಸಾಮಗ್ರಿಯಾಗಿ ಬಳಸಿಕೊಳ್ಳಲು ಸಾಧ್ಯವಿದೆ. ಇದಕ್ಕೆ ಒಂದು ಉದಾಹರಣೆಯನ್ನು ಗಮನಿಸೋಣ. ಒಬ್ಬ ಕವಿ ಒಂದು ಕವಿತೆಯನ್ನು ರಚಿಸಿ ಅದನ್ನು ಎಐಗೆ ಕೊಟ್ಟು ಸಂಗೀತದ ಸಹಯೋಗದಲ್ಲಿ ಹಾಡು ಎಂದು ಸೂಚನೆ ಕೊಟ್ಟರೆ ಮುಗಿಯಿತು. ಈ ತಂತ್ರಜ್ಞಾನವು ಕಂಪ್ಯೂಟರ್ ಅಥವಾ ಮೊಬೈಲ್‌ನಲ್ಲಿ ಟೈಪಿಸಿದ ಲಿಪಿಯನ್ನು ಓದಿಕೊಳ್ಳುತ್ತಾ ಸಂಗೀತ ಸಂಯೋಜನೆ ಮೂಲಕ ಇಂಪಾದ ಧ್ವನಿಯೊಂದಿಗೆ ಹಾಡಲು ಪ್ರಾರಂಭಿಸುತ್ತದೆ. ಇದು ಇಂದಿನ ಎಐನ ಫಲ.

ಆಡಳಿತ ಭಾಷೆಯಲ್ಲಿ ಎಐ ಬಳಕೆಯ ಸಾಧ್ಯತೆ

ಸರ್ಕಾರವು ತನ್ನ ಆಡಳಿತದಲ್ಲಿ ಯಾವುದೇ ಪತ್ರವನ್ನು ಹೊರಡಿಸುವಾಗ ಹಲವು ಬಗೆಯ ಸವಾಲುಗಳು ಎದುರಾಗುವ ಸಾಧ್ಯತೆಯಿದೆ. ಪತ್ರದಲ್ಲಿ ಬಳಸುವ ಪದಗಳು ಸಾಮಾನ್ಯ ಜನರಿಗೆ ಸುಲಭವಾಗಿ ಅರ್ಥವಾಗುವಂತಿರಬೇಕು. ಕನ್ನಡ

ಭಾಷೆಯಲ್ಲಿ ಅನೇಕ ಭಾಷೆಯ ಪದಗಳು ಮಿಳಿತಗೊಂಡಿವೆ. ಅವುಗಳು ಅಚ್ಚಕನ್ನಡದ ಪದವೇ ಎನ್ನುವಷ್ಟರಮಟ್ಟಿಗೆ ಬಳಕೆಯಲ್ಲಿದೆ. ಇಂತಹ ಸಂದರ್ಭದಲ್ಲಿ ಎಐ ಮೂಲಕ ಕನ್ನಡವಲ್ಲದ ಪದಗಳ ವಿಶಿಷ್ಟತೆಯನ್ನು ಪರಿಚಯಿಸುವಲ್ಲಿ ನೆರವನ್ನು ನೀಡಬಹುದು.

ತಾಂತ್ರಿಕವಾಗಿ ಭಾಷೆಯಲ್ಲಿ ಎಐ ಬಳಕೆ

ಶರವೇಗದಲ್ಲಿ ಬೆಳೆಯುತ್ತಿರುವ ಎಐ ತಂತ್ರಜ್ಞಾನವು ವರವೂ ಹೌದು ಮತ್ತು ಶಾಪವೂ ಹೌದು. ಎಕೆಂದರೆ ಈ ತಂತ್ರಜ್ಞಾನದ ಜೊತೆ ಮಾನವನ ಬದುಕಿನ ನಡೆಯು ಸಾಗುತ್ತಿರಬೇಕು. ಇಲ್ಲವಾದಲ್ಲಿ ಬದುಕು ದುಸ್ತರವಾಗುವ ಸಾಧ್ಯತೆಯಿದೆ. ನಾಲ್ಕು ದಶಕದ ಹಿಂದೆ ಬಂದಿರುವ ಕಂಪ್ಯೂಟರ್ ಆರಂಭದಲ್ಲಿ ಆತಂಕವನ್ನೇ ಸೃಷ್ಟಿಸಿತ್ತು. ನಂತರದಲ್ಲಿ ಕಂಪ್ಯೂಟರ್ ತಂತ್ರಜ್ಞಾನದಲ್ಲಿ ನುರಿತವರು ಅದನ್ನು ತಮ್ಮ ಸಾಧನವನ್ನಾಗಿ ಬಳಸಿಕೊಂಡರು. ಭಾಷೆಯನ್ನು ಕೂಡ ಈ ನಿಟ್ಟಿನಲ್ಲಿ ತಾಂತ್ರಿಕ ಸಾಧನವಾಗಿ ಎಐ ಅನ್ನು ಬಳಸಿಕೊಳ್ಳಲು ಸಾಧ್ಯವಿದೆ. ಪ್ರತಿವರ್ಷ ಅನೇಕ ಭಾಷೆಗಳು ಅಳಿದುಹೋಗುತ್ತಿವೆ. ಭಾಷೆಯ ಅಳಿಯುವಿಕೆಗೆ ಸಾಮಾಜಿಕ, ವಲಸೆ, ಉದ್ಯೋಗ ಮುಂತಾದ ಕಾರಣಗಳಿವೆ. ಇಂತಹ ಸಂದರ್ಭದಲ್ಲಿ ಅಳಿವಿನಂಚಿನಲ್ಲಿರುವ ಭಾಷೆಯ ದಾಖಲೀಕರಣಕ್ಕೆ ಈ ತಾಂತ್ರಿಕತೆ ನೆರವಾಗಬಹುದು.

ಎಐ ಮೂಲಕ ಎದುರಾಗುವ ಸವಾಲುಗಳು

ತಾಂತ್ರಿಕವಾಗಿ ಎಐ ಅನ್ನು ಬಳಸಿಕೊಂಡು ಭಾಷೆಯನ್ನು ವ್ಯವಸ್ಥಿತವಾಗಿ ರೂಪಿಸಿಕೊಳ್ಳುತ್ತಾ ಸಾಗಿದರೂ ಈ ತಾಂತ್ರಿಕತೆಯನ್ನು ರೂಪಿಸುವವರು ಪುನಃ ಮಾನವನೇ. ಹೀಗಿರುವಾಗ ಮಾನವನ ಆರೋಗ್ಯಕರ ಆಲೋಚನೆಗಳು ಮೌಲ್ಯಯುತವಾಗಿ ರೂಪುಗೊಂಡರೆ ಸಮಸ್ಯೆಯಿಲ್ಲ. ಕೆಲವೊಮ್ಮೆ ಮಾನವನಲ್ಲಿರುವ ಅಜ್ಞಾನ, ಅತೃಪ್ತಿ, ಅಸಮಾಧಾನ ಮುಂತಾದವುಗಳು ಪ್ರೊಗ್ರಾಮಿಂಗ್ ಮಾಡುವ ವ್ಯಕ್ತಿಯ ತಲೆಯಲ್ಲಿ ಹೊಕ್ಕುಬಿಟ್ಟರೆ ಆಗುವ ಅನಾಹುತಗಳು ಬೇರೆಯೇ ಆಗಿರುತ್ತವೆ. ಇನ್ನು ಮಾನವನು ಮಾಡುವ ಕೆಲಸಗಳನ್ನೇ ಯಂತ್ರಗಳಿಗೆ ಒಪ್ಪಿಸಿದರೆ ಆ ಯಂತ್ರಗಳು ಹೊಸ ಆಲೋಚನೆ ಮತ್ತು ರಚನಾತ್ಮಕ ಕೆಲಸಗಳನ್ನು ಮಾಡದೇ ಇರುವ ಸಾಧ್ಯತೆಯಿದೆ. ಕೆಲವೊಮ್ಮೆ ಸುಳ್ಳು ಮಾಹಿತಿ ಹರಡುವ ಸಾಧ್ಯತೆಯಿದೆ. ಹೀಗಾಗಿ ಎಐ ಎನ್ನುವ ತಾಂತ್ರಿಕತೆಯನ್ನು ರಚನಾತ್ಮಕ ಮತ್ತು ನೈತಿಕ ನೆಲೆಯಲ್ಲಿ ಬಳಸಿಕೊಳ್ಳುವಲ್ಲಿ ಮುಂದಡಿಯಿಡಬೇಕಾಗಿದೆ.

ಎಐ ತಂತ್ರಜ್ಞಾನವು ಪ್ರಚಲಿತ ಸಂದರ್ಭವನ್ನು ಅವಲೋಕಿಸುತ್ತ ಇದರ ಮುನ್ನೋಟವನ್ನು ಗಮನಿಸುವುದಾದರೆ, ಮುಂದಿನ ದಿನಗಳಲ್ಲಿ ಈ ತಂತ್ರಜ್ಞಾನವು ಇನ್ನೂ ಸುಧಾರಿತ ಕ್ರಮದಲ್ಲಿ ಬರಲಿದೆ. ಇದರಿಂದ ಜನರ ಬದುಕು ಉತ್ತಮವಾಗಲಿದೆ. ಇದರ ಬಳಕೆ ಮನುಕುಲಕ್ಕೆ ಪೂರಕವಾಗಿರಬೇಕು. ಉದ್ಯೋಗ ಸೃಜಿಸುವಂತಿರಬೇಕು. ಜನರ ಜೀವನ ಮಟ್ಟ ಇನ್ನಷ್ಟು ಉತ್ತಮವಾಗುವಂತಿರಬೇಕು ಎಂದು ಬೆಂಗಳೂರಿನ ಇನ್ನರ್‌ವರ್ಸ್ ಟೆಕ್ ಸಂಸ್ಥೆಯ ಸಹ ಸಂಸ್ಥಾಪಕ ಮತ್ತು ಸಿಇಓ ಕೆ.ಆರ್.ಶಿವರಾಮ್

ಅಭಿಪ್ರಾಯಪಡುತ್ತಾರೆ. ಇದರ ಜೊತೆಗೆ ದೇಶದ ಎಲ್ಲ ಭಾಷಾ ಪರಿಸರ, ಆಯಾ ಭಾಷೆಗಳನ್ನಾಡುವ ಸಮುದಾಯಗಳ ಭಾಷೆ, ಅವರ ಸಾಂಸ್ಕೃತಿಕ ಅನನ್ಯತೆಯು ಉಳಿದುಕೊಳ್ಳಬೇಕಾಗಿದೆ. ಆಗ ಮಾತ್ರ ಎಐ ಮಾನವಕುಲಕ್ಕೆ ವರದಾನವಾಗಲಿದೆ.

ಪರಾಮರ್ಶನ ಗ್ರಂಥಗಳು:

1. ಇ.ಎಸ್.ಸುಧೀಂದ್ರ ಪ್ರಸಾದ್– ಪ್ರಜಾವಾಣಿ ದಿನಾಂಕ: 04–01–2026.
2. ಕ್ಷಮಾ ವಿ. ಭಾನುಪ್ರಕಾಶ್ – ಪ್ರಜಾವಾಣಿ ದಿನಾಂಕ: 14–01–2026.
3. https://kn.wikipedia.org/s/e4e

Funding:

This study was not funded by any grant.

Conflict of interest:

The Authors have no conflict of interest to declare that they are relevant to the content of this article.

About the License:

© The Authors 2024. The text of this article is open access and licensed under a Creative Commons Attribution 4.0 International License.